**ಶ್ರೀ ಜಿ. ವಿ. ಶ್ರೀರಾಮರೆಡ್ಡಿ** : ಅದರಲ್ಲಿ registered recognized unions ಎಂದು ಬರೆಯಿರಿ.

**ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಹಾಗೂ ಹಜ್ ರಾಜ್ಯ ಮಂತ್ರಿಗಳು)** : ಮಾನ್ಯ ಉಪಾಧ್ಯಕ್ಷರೆ, 2005ರ ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪಾಧ್ಯಕ್ಷರು** : ಪ್ರಸ್ತಾವ ಎನೆಂದರೆ "2005ರ ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರುಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ತಿದ್ದುಪಡಿಯೊಂದಿಗೆ ಒಪ್ಪಿಗೆ ನೀಡಲಾಯಿತು.**

**(ಅನುಬಂಧ V)**

**ಶ್ರೀ ಆರಗ ಜ್ಞಾನೇಂದ್ರ** : ಮಾನ್ಯ ಉಪಾಧ್ಯಕ್ಷರೆ, ಈಗ ಎಕೋ situation ಸರಿಯಾಗಿಲ್ಲ.

**ಉಪಾಧ್ಯಕ್ಷರು** : ಇಲ್ಲ, ಚೆನ್ನಾಗಿದೆ, ತಾವು ಕುಳಿತುಕೊಳ್ಳಿ, ಈಗ ಮಾನ್ಯ ಮಾಧುಸ್ವಾಮಿಯವರೂ ಒಳಗೊಂಡಂತೆ ಇನ್ನು ಅನೇಕ ಮಿತ್ರರು ಸೇರಿ ಊಟಕ್ಕೆ ಕರೆದಿದ್ದಾರೆ. ಇವೊತ್ತು ಬಹಳ ಒಳ್ಳೆಯ ದಿವಸ ಕೂಡ ಆಗಿದೆ. ತಾವು ಕುಳಿತುಕೊಳ್ಳಿ. ಇನ್ನೊಂದು ಇದೆ.

**(ಗೊಂದಲ)**

**ಶ್ರೀ ಜಿ. ವಿ. ಶ್ರೀರಾಮರೆಡ್ಡಿ** : ಲಂಚ್ ಅನಂತರ ಮಾಡೋಣ.

**(ಗೊಂದಲ)**

**6. ಪ್ರಕಟಣೆ,**

**ಉಪಾಧ್ಯಕ್ಷರು** : ಆಯಿತು, ಈಗ ಒಂದು ಪ್ರಕಟಣೆ ಇದೆ. ಮಾನ್ಯ ಮಾಧುಸ್ವಾಮಿ ಮತ್ತು ಎಂ. ಪಿ. ನಾಡಗೌಡರು ಹಾಗೂ ಇತರರು ಬಾಂಕ್ವೆಟ್ ಹಾಲ್‌ನಲ್ಲಿ 1.30 ಗಂಟೆಗೆ ಊಟಕ್ಕೆ ಕರೆದಿದ್ದಾರೆ. ಈಗಾಗಲೇ 1.45 ಗಂಟೆಯಾಗಿದೆ.

**ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.**

**(ಸದನವು ಮಧ್ಯಾಹ್ನ 1.45 ಗಂಟೆಗೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)**

**(ಸದನವು ಪುನಃ 3 ಗಂಟೆ 5 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಅಧ್ಯಕ್ಷರು, ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)**